ಮುಖ್ಯವಾದ ಪ್ರದೇಶಗಳಲ್ಲಿ, ಫ್ಲೆಕ್ಸ್‌ಗಳಿಗೆಂದೇ ಮೀಸಲಾಗಿದ್ದ ಜಾಗದಲ್ಲಿ ಹಾಕುತ್ತಿದ್ದರು. ಆಗ ಆ ಜಾಗದಲ್ಲಿ ಹೊಸತೊಂದು ಬಂತೂಂದ್ರೆ ನೋಡೋ ಕುತೂಹಲ ಎಲ್ಲರಿಗೂ ಇರುತ್ತಿತ್ತು. ಈಗೆಲ್ಲ ಹಾಗಿಲ್ಲ, ಕಂಡ ಕಂಡ ಮರಕ್ಕೆಲ್ಲ ಒಂದಲ್ಲಾ ಒಂದು ಬಣ್ಣದ ಪ್ಲಾಸ್ಟಿಕ್ ಶೀಟುಗಳು, ಅಲ್ಲೊಂದಿಷ್ಟು ಮುಂಚಾಚಿದ ಮುಖಗಳು, ವಿಚಿತ್ರ ಆಕಾರದಲ್ಲಿ ನಿಂತ ದೇಹಗಳು. ಮತ್ತೇನಕ್ಕೋ ಶುಭಾಶಯಗಳು... ಕೆಲವೊಬ್ಬರಂತೂ ತಮ್ಮ ಮನೆ ನಾಯಿ ಮರಿ ಹಾಕಿದ್ರೂ ಅದ್ರ ಫೋಟೊ ತೆಗೆದು, 'ಮಾರಾಟಕ್ಕಿದೆ' ಎಂದು ಬರೆದು ಒಂದು ಮರಕ್ಕೆ ನೇತಾಕಿರ್ತಾರೆ. ಅಷ್ಟು ಪ್ರಿಯವಾಗಿದೆ 'ಪ್ರಚಾರ' ಅನ್ನೋದು.

ಮೊದಲೆಲ್ಲಾ ನಗರದ ಸ್ವಾಸ್ಥ್ಯ ಕಾಪಾಡಲು, ಸೌಂದರ್ಯ ಇಮ್ಮಡಿಗೊಳಿಸಲು ಹಸಿರು ಕ್ರಾಂತಿಯಡಿಯಲ್ಲಿ ರಸ್ತೆ ಬದಿಗಳಲ್ಲಿ ಗಿಡ ನೆಟ್ಟು, ನೀರು ಹಾಕಿ ಪೋಷಿಸಿ ಮರ ಬೆಳೆಸಿದ್ದಾಯ್ತು. ಈಗ ರಸ್ತೆ ಅಗಲೀಕರಣ ಕಾರ್ಯಕ್ರಮದ ಅಡಿಯಲ್ಲಿ ಬೆಳೆದ ಮರಗಳನ್ನೆಲ್ಲ ನೆಲಕ್ಕೆ ಉರುಳಿಸಿದ್ದೂ ಆಯ್ತು. ರಸ್ತೆ ಅಗಲೀಕರಣವಾದಮೇಲಂತೂ ಮುಖ್ಯ ರಸ್ತೆಯಲ್ಲಿದ್ದ ಹಸಿರಿನ ಹೆಮ್ಮರಗಳ ಬದಲಿಗೆ ಯಾವುದೊ ಧರ್ಮಕ್ಕೋ ಅಥವಾ ರಾಜಕೀಯಕ್ಕೋ ಸಂಬಂಧಿಸಿದ ಬಣ್ಣ ಬಣ್ಣದ ಫ್ಲೆಕ್ಸ್‌ಗಳು ತಲೆಯೆತ್ತಿ ನಿಂತು ಹಸಿರಿನ ಹಾದಿಯೆಲ್ಲಾ ಈಗ ಬಣ್ಣ ಬಣ್ಣದ್ದಾಗಿದೆ. ಗೂಡಂಗಡಿಯಿಂದ ಹಿಡಿದು ದೊಡ್ಡ ದೊಡ್ಡ ಮಾಲ್‌ಗಳ ಶಿರೋನಾಮೆಗಳು ಹಗಲು ರಾತ್ರಿ ಎನ್ನದೆ ಕಣ್ಣು ಕುಕ್ಕುತ್ತಿರುತ್ತವೆ. ನಾಮ ಫಲಕಗಳೇನು ಆಗಿಂದಾಗ್ಗೆ ಬದಲಾಗಲ್ಲ ಆದ್ರೆ ಈ ಪ್ರಚಾರ ಫಲಕಗಳು ಮಾತ್ರ ಇವತ್ತೊಂದಿದ್ರೆ ನಾಳೆ ಮತ್ತೊಂದು.

ಮೊನ್ನೆ ಸಿಗ್ನಲ್ ಲೈಟ್‌ಹತ್ತಿರ ನಿಂತಿದ್ದಾಗ ಒಂದು ಫ್ಲೆಕ್ಸ್ ನೋಡಿದೆ. ಅದರ ಮೇಲೆ 'ಶಿವ ಗಣಾರಾಧನೆ' ಎಂದಿತ್ತು. ಅದರಡಿಯಲ್ಲಿ ಎಂಬತ್ತರ ವೃದ್ಧೆಯೊಬ್ಬರ ಓವೆಲ್ ಶೇಪ್ ಫ್ರೇಮಿನ ಫೋಟೊ, ಹಣೆಗೆ ಹಚ್ಚಿದ್ದ ವಿಭೂತಿ ಗಾಢವಾಗಿತ್ತು. ತಲೆಮೇಲೆ ಹೊದ್ದಿದ್ದ ಸೆರಗು, ಸ್ವಲ್ಪ ಸೊರಗಿದ ಮುಖ. ಆ ಫೋಟೊಗೆ ಹೂವಿನ ಹಾರ, ಇಕ್ಕೆಲದಲ್ಲಿ ಎರಡು ದೀಪದ ಕಂಬ, ಎಲ್ಲವೂ ಕಂಪ್ಯೂಟರ್ ಕೃಪೆ. ಕೆಳಗೆ ಬಣ್ಣದ ಅಕ್ಷರಗಳಿಂದ 'ಶ್ರೀಮತಿ ಗಂಗಮ್ಮನವರು ದಿನಾಂಕ...ರಂದು ಲಿಂಗೈಕ್ಯರಾಗಿದ್ದಾರೆ, ದಿನಾಂಕ ...ರಂದು ಶಿವಗಣಾರಾಧನೆ. ತಮ್ಮೆಲ್ಲರಿಗೂ ಆದರದ ಸ್ವಾಗತ' ಎಂದು ಬರೆದು ಅದರಡಿಯಲ್ಲಿ ಮನೆಯ ಸದಸ್ಯರೆಲ್ಲರ ಹೆಸರುಗಳನ್ನು ಹಾಕಲಾಗಿತ್ತು. ಆ ಫ್ಲೆಕ್ಸ್‌ನ ಎರಡೂ ಬದಿಗಳಲ್ಲಿ ಮಕ್ಕಳು, ಮೊಮ್ಮಕ್ಕಳು, ಸೊಸೆಯಂದಿರ ಫೋಟೊಗಳನ್ನ ಹಾಕಲಾಗಿತ್ತು, ಮೈತುಂಬ ಒಡವೆ, ರೇಷ್ಮೆಸೀರೆ, ಮುಖದ ಮೇಕಪ್ಪು. ನೋವಿನ ಎಳೆಯೂ ಇಲ್ಲದ ಆಡಂಬರದ ಪ್ರಚಾರ!... ನಗು ಬಾರದಿರಲಿಲ್ಲ ನನಗೆ.

ಗಣಪತಿ ಹಬ್ಬ ಹತ್ತಿರ ಬಂತು ಅಂದ್ರೆ ಸಾಕು ಬ್ಯಾನರ್ ತಯಾರಕರಿಗೆ ಡಿಮ್ಯಾಂಡಪ್ಪೋ ಡಿಮ್ಯಾಂಡು. ಗಲ್ಲಿ ಗಲ್ಲಿಗಳಲ್ಲೂ ಬಣ್ಣ ಬಣ್ಣದ ಫ್ಲೆಕ್ಸಿನ ತೋರಣವೇ ತುಂಬಿರುತ್ತೆ. ಆ ಸಮಯದಲ್ಲಂತೂ ಗಣಪತಿ ಪ್ರಿಯರು ತಮ್ಮ ಮನಸೋಯಿಚ್ಚೆ ಆಕಾರಗಳನ್ನ ಗಣಪತಿಗೆ ಹಾಕಿ ತಾವೂ ಅದರ ಜೊತೆ ನಿಂತು ಫ್ಲೆಕ್ಸ್‌ನಲ್ಲಿ ಮಿಂಚಿಬಿಡ್ತಾರೆ. ಗಣಪತಿಗಳೋ ಸರ್ವ ವೇಷಾಧಾರಿಗಳು. ಯಾರು ಯಾವ ವೇಷ ಹಾಕಿದ್ರೂ ಮರುಮಾತಾಡದೆ ಹಾಕಿಸಿಕೊಳ್ಳುವ ದೇವರು ನಮ್ ಗಣೇಶ. ಕೈಯಲ್ಲಿ ಲಾಂಗ್ ಕೊಟ್ಟು ಜೋಗಿ ಗಣೇಶ ಅಂದ್ರೆ, ಬಂದೂಕು ಕೊಟ್ಟು ವೀರಪ್ಪನ್ ಗಣೇಶ ಅಂತಾರೆ, ಅದೇ ಕೈಗೆ ಬ್ಯಾಟು, ತಲೆಗೆ ಹೆಲ್ಮೆಟ್ ಹಾಕಿ ಧೋನಿ ಗಣೇಶ ಅಂತ ಪ್ರಚಲಿತದಲ್ಲಿ ಯಾರು ಪಾಪ್ಯುಲಾರಿಟಿ ಪಡೆದಿರುತ್ತಾರೋ ಅವರ ವೇಷ ಗಣಪತಿಗೆ ಹಾಕಿ ಕೈಯಲ್ಲಿ ಲಾಂಗೋ, ಕ್ರಿಕೆಟ್ ಬ್ಯಾಟೋ ಕೊಟ್ಟು, ತಾವೂ ಒಂದು ಪೋಸ್